ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
Office of the Registrar Evaluation, Central College Campus, Dr Ambedkar Veedhi, Bengaluru – 560001
Ph: 080-22295559/29572003 Mail: registrarevlubcu@gmail.com/regev@bcu.ac.in

ಸಂಖ್ಯೆ:ಬೆಂ.ನ.ವಿ/ಪ.ವಿ/ಪೋ.ಪ್ರ/ಪಿ.ಜಿ /2023–24/367 ದಿನಾಂಕ: 26.03.2024

## ಅಧಿಸೂಚನೆ

ವಿಷಯ: ಸ್ನಾತಕೋತ್ತರ ಕೋರ್ಸುಗಳ ಸಮ ಸಂಖ್ಯೆ (Even semester) ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸುವಾಗ ಅಂಕಗಳನ್ನು ಕ್ರೋಡೀಕರಿಸಿ ಸರಾಸರಿ ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸುವ ಬಗ್ಗೆ.

ಉಲ್ಲೇಖ: ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ದಿನಾಂಕ 27.02.2024.

******

ದಿನಾಂಕ 27.02.2024ರ ವಿದ್ಯಾವಿಷಯಕ ಪರಿಷತ್ತಿನ ಸಭೆಯ ನಿರ್ಣಯದಂತೆ, ಸ್ನಾತಕೋತ್ತರ ಕೋರ್ಸುಗಳ ಒಂದು, ಮೂರು ಮತ್ತು ಐದನೇ ಸೆಮಿಸ್ಟರ್ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಒಬ್ಬರು ಮೌಲ್ಯಮಾಪಕರು ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸಲಾಗುತ್ತಿದೆ. ಈ ಸೆಮಿಸ್ಟರ್‌ಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಸವಾಲು (Challenge Valuation) ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ, ಮೊದಲ ಮೌಲ್ಯಮಾಪನದಲ್ಲಿ ಗಳಿಸಿದ ಅಂಕಗಳು ಮತ್ತು ಸವಾಲು (Challenge Valuation) ಮೌಲ್ಯಮಾಪನದಲ್ಲಿ ಗಳಿಸುವ ಅಂಕಗಳೊಂದಿಗೆ ಸರಾಸರಿ ಮಾಡಿ ಫಲಿತಾಂಶವನ್ನು ಪ್ರಕಟಿಸುವುದು.

ಸ್ನಾತಕೋತ್ತರ ಕೋರ್ಸುಗಳ ಎರಡು, ನಾಲ್ಕು ಮತ್ತು ಆರನೇ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನವನ್ನು ಇಬ್ಬರು ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿ, ಇಬ್ಬರು ಮೌಲ್ಯಮಾಪಕರು ನೀಡುವ ಸರಾಸರಿ ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸುವುದು. ಫಲಿತಾಂಶ ಪ್ರಕಟಿಸಿದ ನಂತರ ಸವಾಲು (Challenge Valuation) ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಸವಾಲು (Challenge Valuation) ಮೌಲ್ಯಮಾಪನ ಮಾಡಿಸಿ, ಸವಾಲು ಮೌಲ್ಯಮಾಪನದಲ್ಲಿ ಗಳಿಸುವ ಅಂಕಗಳನ್ನು ಪ್ರಥಮ ಮೌಲ್ಯಮಾಪನದಲ್ಲಿ ಇಬ್ಬರು ಮೌಲ್ಯಮಾಪಕರು ನೀಡಿರುವ ಅಂಕಗಳಲ್ಲಿ ಹೆಚ್ಚಿನ ಅಂಕಗಳೊಂದಿಗೆ ಸರಾಸರಿಗೊಳಿಸಿ, ನಂತರ ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸುವುದು. ಈ ಅಧಿಸೂಚನೆ ಅಕ್ಟೋಬರ್/ನವೆಂಬರ್–2023ರ ನಂತರ ನಡೆದಿರುವ / ನಡೆಯುವ ಸ್ನಾತಕೋತ್ತರ ಕೋರ್ಸುಗಳ ಪರೀಕ್ಷೆಗಳಿಗೆ ಅನ್ವಯವಾಗಲಿದೆ.

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ಬೆಂಗಳೂರು ನಗರ ವಿಶ್ವವಿದ್ಯಾಲಯ.
2. ಸ್ನಾತಕೋತ್ತರ ಕೋರ್ಸುಗಳನ್ನು ಹೊಂದಿರುವ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು.
3. ಕುಲಪತಿಗಳು/ಕುಲಸಚಿವರು(ಆ)/ವಿತ್ತಾಧಿಕಾರಿಗಳು/ಅವರ ಆಪ್ತಕಾರ್ಯದರ್ಶಿಗಳಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.